## ಕರ್ನಾಟಕ ವಿಧಾನ ಪರಿಷತ್

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 510

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ರಿಜ್ವಾನ್ ಅರ್ಷದ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 13-12-2018

ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಕನ್ನಡ ಮತ್ತು ಸಂಸ್ಕೃತಿ ಸಚಿವರು

**ವಿಷಯ: ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕನಿಷ್ಠ ಪಿಂಚಣಿ ನೀಡುವ ಬಗ್ಗೆ.**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕನಿಷ್ಠ ಪಿಂಚಣಿ ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೆ; ಇದ್ದಲ್ಲಿ ಎಷ್ಟು ಪಿಂಚಣಿ. ಯಾವಾಗ ನೀಡಲಾಗುವುದು: (ವಿವರ ನೀಡುವುದು). | ಇಲ್ಲ |
| ಆ) | ನಿವೃತ್ತಿಯ ನಂತರ ಬರುತ್ತಿದ್ದ ಕನಿಷ್ಠ ವೇತನವು ನಿಂತು ಹೋಗುವುದರಿಂದ ವಯೋ ಸಹಜ ಕಾಯಿಲೆ ಕಣ್ಣು ಕಾಣಿಸದೆ, ಆಸರೆಯಿಲ್ಲದೆ ಮತ್ತು ಬದುಕು ನಡೆಸಲು ಶಕ್ತಿಯೂ ಕ್ಷೀಣಿಸಿ ಜೀವನ ನಿರ್ವಹಣೆ ಕಷ್ಟ ಸಾಧ್ಯವಾಗುವುದರಿಂದ ಕನಿಷ್ಠ ಪಿಂಚಣಿಯನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ; | ಎನ್.ಪಿ.ಎಸ್ ಲೈಟ್ ಯೋಜನೆಯಡಿ ನೋಂದಣಿಯಾಗಿರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಎನ್.ಪಿ.ಎಸ್ ಟ್ರಸ್ಟಿನಲ್ಲಿ ಅವರ ಖಾತೆಯಲ್ಲಿ ಜಮೆ ಆಗಿರುವ ಮೊತ್ತವನ್ನು ನಿವೃತ್ತಿಯ ನಂತರ ನೀಡಲಾಗುವುದು.<br>ಎನ್.ಪಿ.ಎಸ್ ಲೈಟ್ ಯೋಜನೆಯಡಿ ನೋಂದಣಿಯಾಗದೇ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಇಡಿಗಂಟು ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br>ಅದೇ ಪ್ರದೇಶದಲ್ಲಿ ವಾಸವಾಗಿರುವಂತಹ ನಿವೃತ್ತ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಸೇವೆಯನ್ನು ಬೇರೆ ಇಲಾಖೆಗಳು ವಹಿಸುವ ಇತರೆ ಕೆಲಸಗಳಿಗೆ ಬಳಸಿಕೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಇಲಾಖೆಯು ದಿನಾಂಕ:20/10/2018 ರಂದು ಪತ್ರ ಬರೆಯಲಾಗಿದೆ. |
| ಇ) | ಸಾಮಾಜಿಕ ಭದ್ರತೆಯಲ್ಲಿ ಒಂದಾದ ಇಎಸ್ಐ ಸೌಲಭ್ಯಗಳನ್ನು ನೀಡುವುದರಿಂದ ಸರ್ಕಾರ ಇವರನ್ನು ನಿವೃತ್ತಿವರೆಗೆ ದುಡಿಸಿಕೊಂಡಿದ್ದಕ್ಕೆ ಗೌರವ ನೀಡುವಂತಾಗುವುದರಿಂದ ಸರ್ಕಾರ ಕ್ರಮವಹಿಸುವುದೆ? (ವಿವರ ನೀಡುವುದು) | ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಸೇವೆಯು ಗೌರವ ಸೇವೆಗೆ ಸೇರಿದ್ದು, ಇ.ಎಸ್.ಐ ಸೌಲಭ್ಯ ನೀಡಲು ಅವಕಾಶ ಇರುವುದಿಲ್ಲ. |

ಸಂ:ಮಮಇ 331 ಐಸಿಡಿ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.